ಮಾಡಿದ್ದೇವೆ. ಇದರ ಜೊತೆಗೆ ಎಲ್ಲಿ ಪಾಠಗಳು ಸರಿಯಾಗಿ ಆಗಿಲ್ಲ, ಅಂತಹ ಶಾಲೆಗಳಿಗೆ ಬೇರೆ ಶಾಲೆಗಳಲ್ಲಿರುವಂತಹ ಹೆಚ್ಚುವರಿ ಉಪಾಧ್ಯಾಯರು ಹೋಗಿ ಪಾಠಗಳನ್ನು ಮಾಡಬೇಕೆಂದು ಆದೇಶ ಕೊಡಲಾಗಿದೆ.

ರಾಜ್ಯದಲ್ಲಿ ತಾಲ್ಲೂಕಂವರಾಗಿ ಕೊಳವೆ ಬಾವಿಗಳನ್ನು ಆಳವಡಿಸಂವುದಂ

ಶ್ರೀ. (೧೦) ಶ್ರೀ ಕೆ. ಎಚ್. ಕುರಡಗಿ (ಮಂಂಡರಗಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದಲ್ಲಿ ತಾಲ್ಲೂಕುವಾರು ಜನವರಿಯಿಂದ ಜೂನ್ ತಿಂಗಳು ೧೯೮೩ನೇ ಇಸವಿಯಲ್ಲಿ ಎಷ್ಟು ರಿಗ್ ತೆಗೆಸಲಾಗಿದೆ ಹಾಗೂ ಕೆಲಸ ಪ್ರಾರಂಭಿಸಿದ ತಾರೀಖು ಯಾವುದು;

(ಆ) ಇನ್ನು ಎಷ್ಟು ರಿಗ್ ಬೋರ್ ತೆಗೆಸುವ ಯೋಜನೆಗೆ ಹಣ ಒದಗಿಸಲಾಗಿದೆ;

(ಇ) ಅವುಗಳನ್ನು ತೆಗೆಸಿದ ಮೇಲೆ ಇನ್ನು ಎಷ್ಟು ಹಳ್ಳಿಗಳು ಕುಡಿಯುವ ನೀರಿನ ಬಾವಿಗಳಿಲ್ಲದೆ ಉಳಿಯುತ್ತದೆ.

(ಈ) ರಾಜ್ಯದಲ್ಲಿ ಎಷ್ಟು ಬಾವಿಗಳಿಗೆ ಕೈ ಪಂಪು ಕಟ್ಟಿವೆ ಯಾವಾಗ ದಂರಸ್ತಿ ಪಡಿಸಲಾಗುವುದು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

(ಅ) ರಾಜ್ಯದಲ್ಲಿ ಜನವರಿ ೮೩ ರಿಂದ ಜೂನ್ ೮೩ರ ವರೆಗೆ ಒಟ್ಟು ೯೦೫ ಕೊಳವೆ ಬಾವಿಗಳನ್ನು ತೋಡಲಾಗಿದೆ. ತಾಲ್ಲೂಕ್‌ವಾರ್ ಅಂಕೆ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ತಾಲ್ಲೂಕು ಗಳಲ್ಲಿ ಕೆಲಸ ಪ್ರಾರಂಭಿಸಿದ ತಾ॥ ೧ನೇ ಜನವರಿ ೧೯೮೩.

(ಆ) ರಾಜ್ಯದಲ್ಲಿ ಇನ್ನೂ ೨೬೨೨ ಕುಡಿಯುವ ನೀರನ್ನು ಒದಗಿಸಲು ಗುರ್ತಿಸಲಾದ ಗ್ರಾಮಗಳು ಇರುತ್ತವೆ. ಈ ಗ್ರಾಮಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ಸಾಕಷ್ಟು ಹಣವನ್ನು ಒದಗಿಸಲಾಗಿದೆ.

(ಇ) ಮೇಲೆ ನಮೂದಿಸಿರತಕ್ಕ ಕೊಳವೆ ಬಾವಿಗಳನ್ನು ತೋಡಿದ ಮೇಲೆ ಗುರುತಿಸಲಾದ ತೊಂದರೆಗೊಳಗಾಗಿರುವ ಹಳ್ಳಿಗಳು ಯಾವುದೂ ಉಳಿಯುವುದಿಲ್ಲಾ.

(ಈ) ರಾಜ್ಯದಲ್ಲಿ ಒಟ್ಟು ೫೬೦೦೦ ಕೈ ಪಂಪುಗಳನ್ನು ಕೊಳವೆ ಬಾವಿಗಳಿಗೆ ಆಳವಡಿಸಲಾಗಿದೆ. ಇದರಲ್ಲಿ ಶೇಕಡಾ ೧೦ ರಿಂದ ೧೫ ರಷ್ಟು ಕೈ ಪಂಪುಗಳು ಕೆಡುತ್ತಲಿರುತ್ತವೆ. ಅಂತಹ ಕೈಪಂಪುಗಳನ್ನು ರಿಪೇರಿ ಆಗತ್ಕದ ಬಗ್ಗೆ ವರದಿ ಬಂದ ಒಂದು ವಾರದೊಳಗೆ ದುರಸ್ತಿಪಡಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ABSTRACT OF STATEMENTS SHOWING THE SUCCESSFUL BOREWELLS DRILLED FROM JANUARY 1983 TO JUNE 1983.

Sl. No	Name of the District	Number of Successful Borewells sunk from Jan. 83 to June 1983	Remarks
1	2	3	4
1	Bangalore	858	Figures given in Column. No. 3 are for successful borewells sunk under scarcity programme and also under normal programme both under State & Central Sector
2	Kolar	465	
3	Mysore	900	
4	Mandya	539	
5	Hassan	749	
6	Dakshina Kannada	359	
7	Kodagu	76	
8	Shimoga	597	
9	Chickmagalur	459	
10	Chitradurga	459	
11	Tumkur	605	
12	Dharwad	658	
13	Belgaum	446	
14	Bidar	197	
15	Raichur	415	
16	Bijapur	225	
17	Uttara Kannada	223	
18	Gulbarga	437	
19	Bellary	389	
		9056	

NAME OF DISTRICT : BANGALORE

Sl. No.	Name of the Taluk	No. of Borewells sunk from Jan. to July 1983	Remarks
1	2	3	4
1	Anekal	49	Figures given in
2	Bangalore North	72	the column No. 3
3	Bangalore South	63	are for successful
4	Channapatna	109	borewells sunk
5	Devanahalli	26	under scarcity
6	Doddaballapura	68	programme and
7	Hoskote	40	also under normal
8	Kanakapura	229	programme both
9	Magadi	67	under State and
10	Nelamangala	47	Central Sector
11	Ramanagara	88	
	Total Bangalore Dist.	858	

NAME OF DISTRICT : KOLAR.

1	Bagepalli	45
2	Bangarapet	91
3	Chikkaballapura	34
4	Chintamani	41
5	Gowribidanur	52
6	Gudibanda	40
7	Kolar	33
8	Malur	27
9	Mulbagal	30
10	Siddlagatta	43
11	Srinivasapura	29
	Total Kolar District	465

Name of the District : Mysore

1	Chamarajanagar	115
2	Gundlupet	105
3	Kollegala	90
4	Nanjanagudu	97
5	T. Narasipnra	95
6	Yelandur	51
7	Hunsur	91

1	2	3	4
8	H. D. Kote	68	
9	K. R. Nagar	49	
10	Mysore	56	
11	Periyapatna	83	
	Total Mysore District	900	
Name of the District : Mandya			
1	K.R. Pet	61	
2	Mandya	97	
3	Maddur	74	
4	Malavalli	86	
5	Nagamangala	91	
6	Pandavapura	64	
7	Srirangapatna	66	
	Total Mandya District	539	
Name of the District : Hassan			
1	Alur	101	
2	Arkalgud	171	
3	Arsikere	117	
4	Belur	77	
5	Channarayapatna	61	
6	Hassan	99	
7	Holenarasipura	90	
8	Sakaleshpura	33	
	Total Hassan District	749	
Name of the District : Kodagu			
1	Madikeri	5	
2	Somwarapet	48	
3	Veerajpet	23	
	Total Kodagu District	76	

1	2	3	4
Name of the District :	Dakshina Kannada		
1	Udupi	60	
2	Kundapur	47	
3	Karkala	48	
4	Mangalore	45	
5	Bantwal	39	
6	Puttur	42	
7	Belthangadi	38	
8	Sulya	40	
	Total Dakshina Kannada	359	
Name of the District :	Shimoga		
1	Bhadravathi	55	
2	Channagiri	62	
3	Honnaly	49	
4	Hosanagara	53	
5	Sagar	38	
6	Shikaripura	111	
7	Shimoga	89	
8	Sorab	80	
9	Thirthahalli	60	
	Total Shimoga District	597	
Name of the District :	Chickmagalur		
1	Chikkamagalore	159	
2	Kadur	130	
3	Koppa	28	
4	Mudigere	27	
5	N.R. Pura	12	
6	Sringeri	33	
7	Tarikere	70	
	Total Chickmagalur Dist,	459	
Name of the District :	Chitradurga		
1	Chitradurga	49	
2	Challakere	88	
3	Molakalmuru	37	
4	Hosadurga	78	

1	2	3	4
5	Hiriyur	54	
6	Davanagere	36	
7	Harihara	28	
8	Jagalur	34	
9	Holalkere	55	
	Total Chitradurga District	459	

STATEMENT SHOWING THE SUCCESSFUL BOREWELLS DRILLED FROM JANUARY 1983 TO JUNE 1983

TUMKUR DISTRICT

Sl. No.	Name of Taluk	No. of Successful Borewells sunk	Remarks
1	Tumkur	63	
2	Gubbi	53	
3	Kunigal	72	
4	Tiptur	55	
5	Turuvekere	56	
6	C.N. Halli	49	
7	Madhugiri	59	
8	Koratagere	74	
9	Sira	74	
10	Pavagada	50	
	Total	605	

Name of the District : Belgaum

Sl. No.	Name of Taluk	No. of Successful Borewells sunk	Remarks
1	Athani	47	
2	Bailhongal	69	
3	Belgaum	44	
4	Chikodi	101	
5	Gokak	17	
6	Hukkeri	55	
7	Khanapur	18	
8	Raibag	49	
9	Romadurg	27	
10	Soundatti	19	
	Total	446	

1	2	3	4
Name of the District :	Dharwad		
1	Byadagi	37	
2	Dharwad	41	
3	Gadag	29	
4	Hangal	57	
5	Haveri	81	
6	Hirekerur	45	
7	Hubli	11	
8	Kalghatagi	33	
9	Kundgol	22	
10	Mundargi	32	
11	Nargund	—	
12	Navalgund	18	
13	Ranebennur	53	
14	Ron	53	
15	Savanur	40	
16	Shiggon	80	
17	Shirahatti	26	
		658	
Name of the District :	Raichur		
1	Raichur	45	
2	Deodurga	51	
3	Manvi	41	
4	Lingasagur	68	
5	Kustgi	27	
6	Sindanur	32	
7	Koppal	46	
8	Yelburga	36	
9	Gangavathi	69	
	Total	415	
Name of the District :	Bidar		
1	Burad	36	
2	Bidar	38	
3	Bhalki	49	
4	Basavakalyan	47	
5	Humnabad	27	
	Total	197	

1	2	3	4
Name of the District :	Bijapur		
1	Bijapur	49	
2	Indi	18	
3	Jamakhandi	26	
4	Mudhol	19	
5	Bagalkot	7	
6	Badami	19	
7	Hungund	22	
8	Bilgi	0	
9	B. Bagewadi	28	
10	Muddebihal	23	
11	Sindgi	14	
	Total	225	
Name of the District :	Gulbarga		
1	Afzalpur	43	
2	Aland	48	
3	Chincholi	62	
4	Chittapur	49	
5	Gulbarga	38	
6	Jewargi	48	
7	Sedam	26	
8	Shahapur	49	
9	Sharapur	27	
10	Yadgir	47	
	Total	437	
Name of the District :	Uttara Kannada		
1	Ankola	20	
2	Bhatkal	12	
3	Haliyal	35	
4	Honnavar	42	
5	Karwar	24	
6	Kumta	16	
7	Mundgod	13	
8	Sirsi	21	
9	Supa	18	
10	Siddapur	10	
11	Yellapur	12	
	Total	223	

2		3	4
Name of the District : Bellary			
1	Bellary	73	
2	Sandur	63	
3	Sirguppa	55	
4	Hospet	62	
5	Kudligi	19	
6	H. Halli	44	
7	Hadagali	37	
8	H. B. Halli	36	
	Total	389	

ಶ್ರೀ ಕೆ.ಎಚ್. ಕಂರಡಗಿ (ಮಂಡರಗಿ) ಇಲ್ಲಿ ರಿಪೇರಿ ಆಗತ್ಯದ ಬಗ್ಗೆ ವರದಿ ಬಂದ ಒಂದು ವಾರ ದೊಳಗೆ ದುರಸ್ತಿಪಡಿಸಲು ಸೂಕ್ತ ಕ್ರಮವನ್ನು ಕೈಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ನನ್ನ ಕ್ಷೇತ್ರದಲ್ಲಿ ಈ ಕೈ-ಪಂಪುಗಳು ಕೆಟ್ಟು ೨ ರಿಂದ ೬ ತಿಂಗಳುಗಳಾಗಿದ್ದರೂ ಸಹ ಇನ್ನೂ ರಿಪೇರಿಯಾಗಿಲ್ಲ. ಅಲ್ಲಿ ಸಂಬಂಧಪಟ್ಟವರನ್ನು ಕೇಳಿದರೆ ಸಿಬ್ಬಂದಿಯ ಕೊರತೆ ಇದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣವೇನು?

ಶ್ರೀ ಅಬ್ದುಲ್ ನಜೀರ್‌ಸಾಬ್.--ಈ ಮೊದಲು ೫೦೦ ನಳಗಳನ್ನು ನೋಡಿ ಕೊಳ್ಳಲು ಒಬ್ಬರು ಜೂನಿಯರ್ ಇಂಜಿನಿಯರ್ ಇರುತ್ತಿದ್ದರು. ಒಬ್ಬರು ಒಂದು ದಿನದಲ್ಲಿ ಎರಡು ಕೊಳ್ಳವೆ ಬಾವಿಗಳ ಕೈಪಂಪುಗಳನ್ನು ರಿಪೇರಿ ಮಾಡಲುಸಾಧ್ಯ. ಈ ಲೆಕ್ಕದಲ್ಲಿ ಕೆಟ್ಟ ಕೊಳವೆ ಭಾವಿಯನ್ನು ರಿಪೇರಿ ಮಾಡಲು ೨೫೦-ದಿನಗಳು ಬೇಕಾಗಬಹುತ್ತವೆ. ಇದನ್ನು ತಪ್ಪಿಸಲು ನಾನು ಫೆಬ್ರುವರಿ ತಿಂಗಳಲ್ಲಿ ಏನು ಆದೇಶ ಕೊಟ್ಟಿದ್ದೇನೆಂದರೆ, ಎಲ್ಲೆಲ್ಲಿ ಸಿಬ್ಬಂದಿ ವರ್ಗದ ಕೊರತೆ ಇದೆ, ಅಲ್ಲೆಲ್ಲಾ ನಾಮಿನಲ್ ರೋಲ್‌ನಲ್ಲಿ ನೇಮಕ ಮಾಡಿಕೊಂಡು ಜಾಗ್ರತೆ ರಿಪೇರಿ ಮಾಡಿಸಿ ಮತ್ತು ಇದಕ್ಕಾಗಿ ವಾಹನ ಸೌಕರ್ಯವನ್ನೂ ಪಡೆದುಕೊಳ್ಳಬಹುದೆಂದು ಹೇಳಿದ್ದೇನೆ. ಎಲ್ಲಿಯಾದರೂ ನನ್ನ ಈ ಆದೇಶ ಪಾಲನೆ ಯಾಗದಿದ್ದರೆ ನನ್ನ ಆದೇಶವನ್ನು ಕೂಡಲೇ ಪಾಲನೇ ಮಾಡುವಂತೆ ಮತ್ತೆ ಆದೇಶ ಕೊಡುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ; ತಮ್ಮ ಆದೇಶದ ಪ್ರಕಾರ ಜಾಗ್ರತೆ ಇವುಗಳನ್ನು ರಿಪೇರಿ ಮಾಡಲು ಅನೇಕ ತಾಲ್ಲೂಕ್‌ಗಳಲ್ಲಿ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ಇದಕ್ಕೆ ಬೇಕಾದರೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಆದ್ದರಿಂದ ಇವುಗಳ ರಿಪೇರಿಯನ್ನು ಜಾಗ್ರತೆ ಮಾಡಿಸಲು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದರ ಒಂದು ಸಮಸ್ಯೆ ನನಗೆ ಅರ್ಥವಾಗಿದೆ. ಕೆಲವು ಕೈ-ಪಂಪ್‌ಗಳನ್ನು ಇವೊತ್ತು ರಿಪೇರಿ ಮಾಡಿದರೆ ನಾಳೆ ಮತ್ತೆ ಕೆಡುತ್ತವೆ. ಇದಕ್ಕೆ ಕಾರಣವೆಂದರೆ ಪಟೇಲ್ ಮಾತ್ತು ಜ್ವಾಲಾ ಮಾರ್ಕಿನ ಪಂಪುಗಳಂ ಒಳ್ಳೆಯವಲ್ಲವೆಂಬ ಅಭಿಪ್ರಾಯವಿದೆ. ಇದರ ಜೊತೆಗೆ ಈಗ ಅಳವಡಿಸಿರುವ ಅನೇಕ ಪಂಪ್‌ಗಳು ಹಳೆಯದಾಗಿವೆ ಎಂಬ ಅಭಿಪ್ರಾಯವು ಸಹ ಇದೆ. ಮಾರ್ಕ್-೨ ಪಂಪ್‌ಗಳಾದರೆ ಜಾಗ್ರತೆ ಕೆಡುವುದಿಲ್ಲ. ಈ ಕಾರಣದಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಹೊಸದಾಗಿ ಎಲ್ಲವನ್ನೂ ಮಾಡಬೇಕಾಗಂತ್ತದೆ. ಈಗ ಕೆಟ್ಟಿರುವ ಕಡೆಗಳಲ್ಲಿ ರಿಪೇರಿ ಮಾಡಿಸಲು ಎಲ್ಲಿಯಾದರೂ ಸಿಬ್ಬಂದಿ ಯನ್ನು ನೇಮಕ ಮಾಡಿಕೊಂಡಿಲ್ಲದಿದ್ದರೆ, ಆದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಎಚ್. ಡಿ. ಲಮಾಣಿ.—ಈಗ ನಮ್ಮ ತಾಲ್ಲೂಕ್‌ನಲ್ಲಿರುವ ಬಿ.ಡಿ.ಒ. ಅವರ ಬಳಿಯಾಗಲೀ ತಹಶೀಲ್‌ದಾರರ ಬಳಿಯಾಗಲೀ ವಾಹನ ಸೌಕರ್ಯವಿಲ್ಲದಿರುವಾಗ ಯಾವ ರೀತಿ ಇವುಗಳನ್ನು ರಿಪೇರಿ ಮಾಡಿಸಲು ಸಾಧ್ಯ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಎಲ್ಲಿ ಸರ್ಕಾರದ ವಾಹನಗಳು ಇಲ್ಲವೊ, ಅಂತಹ ಕಡೆಗಳಲ್ಲಿ ಬಾಡಿಗೆ ಕೊಟ್ಟು ವಾಹನ ಪಡೆದುಕೊಂಡು ಈ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ನಾನು ಆದೇಶ ಕೊಟ್ಟಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮ ಭಾಗದಲ್ಲಿ ನೂರಕ್ಕೆ ೭೦ ಭಾಗ ಕೊಳವೆ ಬಾವಿಗಳು ರಿಪೇರಿಯಾಗಿಲ್ಲ. ಆದ್ದರಿಂದ ರಿಪೇರಿ ಕೆಲಸ ಸರಿಯಾಗಿ ನಡೆಯುವಂತೆ ಮಾಡುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗ ಪೂರ್ಣವಾಗಿ ಹಳೆಯ ಪೈಪುಗಳನ್ನು ಬದಲಾವಣೆ ಮಾಡತಕ್ಕಂತಹ ಯೋಜನೆ ಹಾಕಿಕೊಂಡಿದ್ದೇನೆ. ಮುಂದಿನ ವರ್ಷ ಹಳೆಯ ಪೈಪುಗಳನ್ನು ಬದಲಾವಣೆ ಮಾಡಿ ಮಾರ್ಕ್-೨ ಪೈಪುಗಳನ್ನು ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈಗಿರ ತಕ್ಕ ಪಂಪುಗಳನ್ನು ಬೆಳಿಗ್ಗೆ ರಿಪೇರಿ ಮಾಡಿದರೆ ಸಾಯಃಕಾಲ ಕೆಟ್ಟು ಹೋಗುತ್ತವೆ. ಆದ್ದರಿಂದ ಮಧ್ಯೆ ಮಧ್ಯೆ ರಿಪೇರಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಹೊಸ ಪಂಪುಗಳನ್ನು ಅಳವಡಿಸತಕ್ಕ ಯೋಜನೆಯನ್ನು ಹಾಕಿ ಕೊಂಡಿದ್ದೇವೆ.

ಶ್ರೀ ಎಂ ಆನಂದರಾವ್.—ಸಂಧಾ ವಾರಪತ್ರಿಕೆಯಲ್ಲಿ ಕುಡಿಯುವ ನೀರಿನ ಬಗ್ಗೆ ಒಂದು ಸಮೀಕ್ಷೆ ನಡೆಸಿ ವರದಿಯನ್ನು ಚೆನ್ನಾಗಿ ಕೊಟ್ಟಿದ್ದಾರೆ. ಬೀದರ್ ಜಿಲ್ಲೆಯಲ್ಲಿ 'ವಿಶ್ವ ಸಂಸ್ಥೆಯ ಅಂತರ ರಾಷ್ಟ್ರೀಯ ಮಕ್ಕಳ ತುರ್ತು ನಿಧಿ, (ಯುನಿಸೆಫ್) ಯಿಂದ ಒಂದು ವ್ಯವಸ್ಥೆ ಮಾಡಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ಕೊಳವೆ ಬಾವಿಗಳ ಯೋಗ ಕ್ಷೇಮ ನೋಡಿಕೊಳ್ಳಲು ಹಳ್ಳಿ ಹಳ್ಳಿಗಳಲ್ಲಿ ಸ್ವಯಂಸೇವ ಕರನ್ನು ನೇಮಿಸುವ ಯೋಜನೆ ಹಾಕಿಕೊಂಡಿದ್ದಾರೆಂದು ತಿಳಿದು ಬಂದಿದೆ. ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲೂ ಇದರ ಅವಶ್ಯಕತೆ ಇದೆ. ಹಿಂದಿನ ಕಾಲದಲ್ಲಿ ನೀರು ಸರಬರಾಜು ವ್ಯವಸ್ಥೆ ನೋಡಿ ಕೊಳ್ಳಲು 'ನೀರಗಂಟಿ' ಇದ್ದಂತೆ ಪ್ರತಿಗ್ರಾಮಕ್ಕೂ ಕೊಳವೆ ಬಾವಿಯ ಯೋಗಕ್ಷೇಮ ನೋಡಿಕೊಳ್ಳಲು ಒಬ್ಬರು ಅಗತ್ಯವಾಗಿ ಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆಯೇ?

ಶ್ರೀ ಅಬ್ದುಲ್ ನಜೀರ್‌ಸಾಬ್.—(ಯುನಿಸೆಫ್)ನವರು ಕೊಟ್ಟ ಸಲಹೆ ಪ್ರಕಾರ ಒಂದು ಯೋಜನೆ ಹಾಕಿಕೊಳ್ಳಲಾಗುತ್ತದೆ. ಮದ್ರಾಸ್ ರಾಜ್ಯದಲ್ಲಿ 'ಜಸ್ಟಿ ಟೈರ್ ಸಿಸ್ಟಮ್' ವ್ಯವಸ್ಥೆ ಇದೆ. ಪ್ರತಿಯೊಂದು ಗ್ರಾಮದಲ್ಲೂ ಗ್ರಾಮ ಪರಿಚಾರಕರನ್ನು ನೇಮಕ ಮಾಡತಕ್ಕ ಸಲಹೆ ಒಳ್ಳೆಯದೆಂದು ಇದೆ. ಅದನ್ನು ವಿಚಾರ ಮಾಡೋಣ.

ಶ್ರೀ. ಎಸ್. ಸೂರ್ಯನಾರಾಯಣರಾವ್.—ಅನೇಕ ಗ್ರಾಮಗಳಲ್ಲಿ ಕೊಳವೆಬಾವಿಗಳನ್ನು ತೊಡಿದ್ದೀರಿ ಆದರೆ ಪಂಪುಗಳನು ಹಾಕಿಲ್ಲ. ಕೊಳವೆ ಬಾವಿಗಳನ್ನು ದುರಸ್ತಿ ಮಾಡಲು ಮೆಕ್ಯಾನಿಕ್‌ಗಳು ಇಲ್ಲ ಸರ್ಕಾರದ ಉದ್ದೇಶವೇನೋ ಒಳ್ಳೆಯದು ಇದು. ಕೊಳವೆ ಬಾವಿ ತೊಡಿದ ಮೇಲೆ ಜನರಿಗೆ ನೀರು ಸಿಗುಬೇಕು. ಜನಗಳಿಗೆ ಕುಡಿಯುವ ನೀರು ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಇವತ್ತಿನ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿಗೆ ಬಹಳ ತೊಂದರೆಯಿದೆ. ಪಂಪುಗಳೇನಾದರೂ ಕೆಟ್ಟರೆ ೩-೪ ತಿಂಗಳಾದರೂ ರಿಪೇರಿ ಆಗುವುದಿಲ್ಲ. ಇದಕ್ಕಿಂತ ಮುಖ್ಯವಾಗಿ ರಿಪೇರಿ ಮಾಡತಕ್ಕ ಮೆಕ್ಯಾನಿಕ್‌ಗಳನ್ನು ನೇಮಕ ಮಾಡಿಕೊಳ್ಳತಕ್ಕ ವ್ಯವಸ್ಥೆ ಮಾಡದಿದ್ದರೆ ನೀವು ಹಾಕಿಕೊಂಡಿರತಕ್ಕ ಉದ್ದೇಶ ಸಾಧನೆಯಾಗುವುದಿಲ್ಲ. ಕೊಳವೆ ಬಾವಿ ತೆಗೆಯುವಾಗಲೂ ಸಹ ಲಂಚದ ಅಪಾದನೆ ಕೇಳಿಬರುತ್ತಿದೆ, ಕೆಲವು ಇಂಜಿನಿಯರ್‌ಗಳು ಕೊಳವೆ ಬಾವಿಗಳಿಗೆ ಪೈಪುಗಳನ್ನು ಹಾಕುವಾಗ, ಹಳೆಯ ಪೈಪುಗಳನ್ನು ಹಾಕಿ ಹೊಸ ಪೈಪುಗಳನ್ನು ಹಾಕಿದ್ದೇವೆಂದು ಚಾರ್ಜ್ ಮಾಡುತ್ತಿದ್ದಾರೆ. ಆ ಪಂಪುಗಳು ಕೆಲಸ ಮಾಡದೆ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ನನ್ನ ಕ್ಷೇತ್ರದ ಬಿ. ನಾರಾಯಣಪುರದಲ್ಲಿ ಕೊಳವೆ ಬಾವಿಯಲ್ಲಿ ನೀರು ಸಿಗದೆ, ತೋಡು ಬಾವಿಯಲ್ಲಿ ನೀರು ತರಲು ಹೋದ ಒಬ್ಬ ಹೆಣ್ಣು ಮಗಳು ನೀರು ಸೇದುವಾಗ ಬಾವಿಗೆ ಬಿದ್ದು ಸತ್ತು ಹೋದಳು. ಈಗ ಮಾನ್ಯ ಮಂತ್ರಿಗಳು ಪಿ.ಎಚ್.ಇ. ಡಿಪಾರ್ಟ್‌ಮೆಂಟ್‌ನವರಿಗೆ ಹೇಳಿ, ಮಳೆಗಾಲ ಬಂತೆಂದು ಕೊಳವೆ ಬಾವಿಗಳನ್ನು ತೊಡುವುದನ್ನು ನಿಲ್ಲಿಸುತ್ತಿದ್ದಾರೆ, ಕೊಳವೆ ಬಾವಿ ತೋಡುವುದನ್ನು ಖಂಡಿತ ನಿಲ್ಲಿಸಬಾರದೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ಬಗ್ಗೆ ನಿರ್ದಿಷ್ಟವಾದ ಆಪಾದನೆಗಳು ಇದ್ದರೆ ಬರೆದು ತಿಳಿಸಿದರೆ ಅಂತಹ ಕಡೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಕೊಳವೆ ಬಾವಿ ರಿಪೇರಿ ಮಾಡುವ ಬಗ್ಗೆ ನಮ್ಮ ಇಲಾಖೆಯು ಕಾರ್ಯದರ್ಶಿಯವರು ತಾಲ್ಲೂಕು ಮಟ್ಟಗಳಲ್ಲಿ ಸಭೆಯನ್ನು ನಡೆಸಿದ್ದಾರೆ. ರಿಪೇರಿ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಸಭೆ ನಡೆಸಲಾಗಿದೆ. ಹಿಂದಿನ ಆರು ತಿಂಗಳಲ್ಲಿದ್ದ ಪರಿಸ್ಥಿತಿಗಿಂತ ಈಗ ಸ್ವಲ್ಪ ಸುಧಾರಿಸಿದೆ. ಈ ಕೆಲಸದ ಬಗ್ಗೆ ನನಗೂ ಕೂಡ ತೃಪ್ತಿಯಿಲ್ಲ, ಪಂಪುಗಳ ಪರಿಸ್ಥಿತಿ ಹಾಗೆ ಇದೆ. ವಾಹನಗಳ ತೊಂದರೆ ಇರುವ ಕಡೆ ಬಾಡಿಗೆ ಕೊಟ್ಟು ವಾಹನ ತೆಗೆದುಕೊಂಡು ರಿಪೇರಿ ಮಾಡತಕ್ಕ ವ್ಯವಸ್ಥೆ ಮಾಡಲಾಗಿದೆ. ಮೆಕ್ಯಾನಿಕ್‌ಗಳನ್ನು ದಿನಗೂಲಿಯ ಮೇಲೆ ನೇಮಕ ಮಾಡಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ. ಒಂದು ತಾಲ್ಲೂಕಿಗೆ ೪ ಮೆಕ್ಯಾನಿಕ್‌ಗಳನ್ನು ನೇಮಿಸುವಂತೆ ತಿಳಿಸಿದ್ದೇವೆ. ರಿಪೇರಿ ಕೆಲಸ ಎಲ್ಲೆ ಸರಿಯಾಗಿ ನಡೆಯುತ್ತಿಲ್ಲ ಅಂತಹ ಕಡೆಗಳಿಂದ ತಾವು ಪತ್ರ ಬರೆದರೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಬಿ. ಬಸವನಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ನಜೀರ್ ಸಾಹೇಬರನ್ನು ನೀರಿನ ಸಾಹೇಬರು ಎಂದು ಕರೆಯುತ್ತಾರೆ. ಈಗ ಕೊಳವೆಬಾವಿ ತೋಡುವುದನ್ನು ನಿಲ್ಲಿಸುತ್ತಿದ್ದಾರೆ. ಕುಡಿಯುವ ನೀರಿನ ಬಗ್ಗೆ ತೊಂದರೆಯಿರುವುದರಿಂದ, ಕೊಳವೆ ಬಾವಿ ತೋಡುವುದನ್ನು ದಯವಿಟ್ಟು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವವಿದೆ ಅಂತಹ ಕಡೆಗಳಲ್ಲಿ ಈಗಾಗಲೇ ೧೧ ಸಾವಿರ ಕೊಳವೆ ಬಾವಿಗಳನ್ನು ತೋಡಿ ಮುಗಿಸಿದ್ದೇವೆ. ಇನ್ನೂ ಅರೂವರೆ ಸಾವಿರ ಕೊಳವೆ ಬಾವಿಗಳು ಬೇಕು ಎನ್ನುವ ಚಿತ್ರ ಸರ್ಕಾರದ ಮುಂದಿದೆ. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವವಿದೆ ಅಂತಹ ಕಡೆಗಳಲ್ಲಿ ಬಾವಿಗಳನ್ನು ತೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ ಈ ಸರ್ಕಾರದ ಉದ್ದೇಶವನ್ನು ಪಾಲನೆ ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳು ಜನವರಿ ೧೯೮೩ ರಿಂದ ಜೂನ್ ೮೩ ರವರೆಗೆ ೯ ಸಾವಿರ ಕೊಳವೆ ಬಾವಿಗಳನ್ನು ಕೊರೆದಿದ್ದೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಜಿಲ್ಲಾವಾರು ಎಷ್ಟು, ತಾಲ್ಲೂಕುವಾರು ಎಷ್ಟು ಎನ್ನುವ ಅಂಕಿ ಸಂಖ್ಯೆಗಳನ್ನು ಸಹ ಕೊಟ್ಟಿದ್ದಾರೆ ಆದರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ೮೫೮ ಕೊಳವೆ ಬಾವಿ ಮೈಸೂರು ಜಿಲ್ಲೆಯಲ್ಲಿ ೯೦೦, ಹೀಗೆ ಕೊಟ್ಟಿದ್ದಾರೆ ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕುನಲ್ಲಿ ೨೨೯ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಇಲ್ಲಿ ವಿವರ ಕೊಟ್ಟಿದ್ದಾರೆ. ಬೆಂಗಳೂರು ಜಿಲ್ಲೆಯ ಇತರೆ ತಾಲ್ಲೂಕುಗಳಾದ ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ ಈ ತಾಲ್ಲೂಕುಗಳಲ್ಲಿ ೨೦,೪೦,೨೬ ಕೊಳವೆಬಾವಿಗಳನ್ನು ತೋಡಿದ್ದಾರೆ. ಆದರೆ ಕನಕಪುರದ ಒಂದೇ ತಾಲ್ಲೂಕಿನಲ್ಲಿ ೨೨೯ ಕೊಳವೆಬಾವಿಗಳನ್ನು ತೋಡುವುದಕ್ಕೆ ಪ್ರಭಲವಾದ ಕಾರಣ ಏನಿತ್ತು ? ಇದನ್ನು ಭ್ರಷ್ಟಾಚಾರವೆಂದು ಹೇಳುತ್ತೀರಾ? ಇದರ ಬಗ್ಗೆ ದಯವಿಟ್ಟು ತಿಳಿಸಬೇಕಂ?. ಏಕೆಂದರೆ ನಮ್ಮ ಜಿಲ್ಲೆಯಲ್ಲೂ ಕೂಡ ಕುಡಿಯುವ ನೀರಿನ ಅಭಾವ ಜಾಸ್ತಿಯಿದೆ. ಆದರೆ ಈ ಒಂದೇ ತಾಲ್ಲೂಕಿನಲ್ಲಿ ೨೨೯ ಕೊಳವೆ ಬಾವಿಗಳನ್ನು ತೋಡಿದ್ದಾರೆ ಅಂದರೆ ಇದನ್ನು ಏಂತಹ ಭ್ರಷ್ಟಾಚಾರ ಎನ್ನುವುದು? ಇದರ ಬಗ್ಗೆ ತಿಳಿಸಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಎಲ್ಲಾ ಕಡೆಗಳಿಗಿಂತ ಕನಕಪುರ ತಾಲ್ಲೂಕಿನಲ್ಲಿ ಈ ಕೆಲಸ ಜಾಸ್ತಿಯಾಗಿದೆ. ಆದನ್ನು ನಾನು ಒಪ್ಪುತ್ತೇನೆ. ಗುಲ್ಬರ್ಗ ಮತ್ತು ಬಿದರ್ ಜಿಲ್ಲೆಗಳಲ್ಲಿ ಕೆಲಸ ಸ್ವಲ್ಪ ಕಡಿಮೆಯಾಗಿದೆ. ಏತಕ್ಕೆ ಕಡಿಮೆಯಾಗಿದೆ ಅಂದರೆ ಅಲ್ಲಿ ಒವರ್ ಬರ್ಡನ್ ಏರಿಯಾ. ಯಾವುದೇ ಪ್ರೈವೇಟ್ ಕಂಪನಿಯವರನ್ನು ಕೊಳವೆಬಾವಿ ತೋಡುವುದಕ್ಕೆ ಕಳುಹಿಸಿದರೂ ಅಲ್ಲಿ ಅವರು ಕೆಲಸ ಮಾಡುವುದಕ್ಕೆ ಒಪ್ಪುವುದಿಲ್ಲ. ಆ ದೃಷ್ಟಿಯಿಂದ ಅಲ್ಲಿಗೆ ಸರ್ಕಾರೀ ಯಂತ್ರಗಳನ್ನು ಕಳುಹಿಸಿ ಕೆಲಸ ಮಾಡಿಸಬೇಕು ಅದಕ್ಕೋಸ್ಕರ ನಿಧಾನವಾಗಿದೆ. ಕನಕಪುರ ತಾಲ್ಲೂಕಿನಲ್ಲಿ ೧೯೭೬ರಲ್ಲಿ ಕುಡಿಯುವ ನೀರಿನ ಅಭಾವ ಭಯಂಕರವಾಗಿತ್ತು. ಆ ತಾಲ್ಲೂಕಿನಲ್ಲಿ ೬೫೦ ಹಳ್ಳಿಗಳು ಬರುತ್ತವೆ. ಆದೇ ಮೈಸೂರು ಜಿಲ್ಲೆಯ ಯಳಂದೂರು ತಾಲ್ಲೂಕಿನ ೩೫ಹಳ್ಳಿಗಳಿವೆ. ಕುಡಿಯುವ ನೀರಿನಲ್ಲಿ ಭ್ರಷ್ಟಾಚಾರ ಹೇಗೆ ಬರುತ್ತದೆ?

ಶ್ರೀ ಗೋವಿಂದ ಪಿ. ಒಡೆಯ ರಾಜ್.—ಬೇರೆ ತಾಲ್ಲೂಕುಗಳಲ್ಲಿ ಇದೇ ರೀತಿ ಏತಕ್ಕೆ ಕೆಲಸ ಮಾಡಲಿಲ್ಲ ?

ಶ್ರೀ ಎಂ. ಮಹಾದೇವ್.—ಕುಡಿಯುವ ನೀರಿನ ಕೆಲಸ ಮಾಡುವುದಕ್ಕೆ ಪ್ರತಿ ತಾಲ್ಲೂಕಿನಲ್ಲೂ ಸಿವೆಂಟಿನ ಅಭಾವವಿದೆಯೆಂದೂ ತಾಲ್ಲೂಕು ಸಮಿತಿಗಳಲ್ಲಿ ಜಿಲ್ಲಾ ಸಮಿತಿಗಳಲ್ಲಿ ಅಧಿಕಾರಿಗಳು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಯಾವರೀತಿ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ಸಮಸ್ಯೆ ಮೊದಲು ಇತ್ತು. ಈಗ ಸಿವೆಂಟಿನ ಅಭಾವವಿಲ್ಲ. ನಮ್ಮ ಇಲಾಖೆಯಲ್ಲಿ ಸಾಕಷ್ಟು ಸಿಮೆಂಟ್ ಇದೆ.

ಶ್ರೀ ಯಾವಗಲ್.—ಕೊಳವೆಬಾವಿ ತೆಗೆಯಲು ನಮ್ಮ ಏರಿಯಾದಲ್ಲಿ ಬಹಳ ಕಷ್ಟವಿದೆ. ತೆಗೆದರೂ ಕುಡಿಯಲಿಕ್ಕೆ ಯೋಗ್ಯವಾದ ನೀರು ದೊರಕುವುದು ಕಷ್ಟವಿದೆ. ಆದ್ದರಿಂದ ಸೈಕ್ಲೋನ್ ರಿಗ್ ಕಳುಹಿಸಿ ಕೊಳವೆಬಾವಿ ತೋಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಈಗಾಗಲೇ ಆಶ್ವಾಸನೆ ಕೊಟ್ಟಿರುವುದರಿಂದ ಅದರ ಬಗ್ಗೆ ಗಮನಹರಿಸಲಾಗಿದೆಯೆ ಎಂದು ಕೇಳುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕುಡಿಯಲಿಕ್ಕೆ ಯೋಗ್ಯ ನೀರನ್ನು ಕೊಡಬೇಕೆಂಬುದು ನಿಜ. ಈಗ ಸೈಕ್ಲೋನ್ ರಿಗ್‌ಗಳು ಬೀದರ್ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆ. ಅಲ್ಲಿ ಕೆಲಸ ಮುಗಿದ ನಂತರ ನಿಮ್ಮ ಕಡೆಗೆ ಬರುತ್ತವೆ.

ಹೊನಗುಂದ ತಾಲೂಕಿನ ಅಮೀನಗಡದಲ್ಲಿ ನೀರಿನ ಸರಬರಾಜನ್ನು ಸಮರ್ಪಕವಾಗಿ ವಿತರಣೆ ಮಾಡುವುದು.

೫೫ (೪೦) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಲೇದ್‌ಗುಡ್ಡ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?.

ಅ) ಹನಗುಂದ ತಾಲ್ಲೂಕಿನ ಅಮೀನಗಡದಲ್ಲಿ ನೀರು ಸರಬರಾಜು ಸರಿಯಾಗಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ;

ಇ) ನೀರು ಸರಬರಾಜನ್ನು ವ್ಯವಸ್ಥಿತಗೊಳಿಸಲು ಸರ್ಕಾರದವರು ಸಕಾಲದಲ್ಲಿ ಕ್ರಮ ಕೈಕೊಳ್ಳುವರೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.—(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) ಹೌದು.

ಆ) ಮೂಲ, ಯೋಜನೆಯಲ್ಲಿ ಈ ಗ್ರಾಮದ ಕೆಲವು ಎತ್ತರದ ಸ್ಥಳಗಳಿಗೆ ನಳವನ್ನು ಹಾಕಿಲ್ಲ. ಈ ಗ್ರಾಮವು ಇತ್ತೀಚೆಗೆ ಬಡಾವಣೆ ಹೊಂದಿದೆ. ಈ ಬಡಾವಣೆ ಪ್ರದೇಶಕ್ಕೂ ಕೂಡ ನಳವನ್ನು ಹಾಕಿರುವುದಿಲ್ಲ.

ಇ) ಸರಕಾರವು ಈಗಾಗಲೇ ನೀರು ಸರಬರಾಜು ವಿಸ್ತರಣಾ ಯೋಜನೆಗೆ ಒಪ್ಪಿಗೆ ನೀಡಿದೆ. ಅದಕ್ಕೆ ಅನುಸಾರವಾಗಿ ೪,೯೮,೨೦೦-೦೦ ರೂಪಾಯಿಗಳಿಗೆ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು ಬೇಗನೆ ಕಾರ್ಯವನ್ನು ಪ್ರಾರಂಭಿಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಮಾನ್ಯ ಅಧ್ಯಕ್ಷರೇ, ಅಮೀನಗಡದಲ್ಲಿ ನೀರು ಸರಬರಾಜು ಯೋಜನೆಗೆ ಸಂಬಂಧಪಟ್ಟಂತೆ ಸುಮಾರು ೪,೯೮,೨೦೦-೦೦ ರೂಪಾಯಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದೇವೆ ಎಂದು ಹೇಳಿದ್ದಾರೆ. ಈ ಗ್ರಾಮದಲ್ಲಿ ಸುಮಾರು ೯ ಸಾವಿರ ಜನಸಂಖ್ಯೆ ಇದ್ದು ಇಲ್ಲಿ